ಆತನಿಗೆ ಏಳು ಜನ ಮಕ್ಕಳಿದ್ದಾರೆ. ನಿರ್ಗತಿಕರಾದ ಅವರಿಗೆ ನಿವೃತ್ತಿ ವೇತನವಿಲ್ಲದೆ ಬೀದಿಯಲ್ಲಿ ಬಂದಿರುವ ಪರಿಸ್ಥಿತಿ ಬಂದಿದೆ. ಇದು ಮಹಿಳಾ ಮಂತ್ರು ಮಕ್ಕಳ ಕಲ್ಯಾಣ ಇಲಾಖೆ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಯನ್ನು ಮಾಡಲಾಗುವುದೆಂದು ಹೊರಟ ಈ ಇಲಾಖೆ, ಇಲಾಖೆಯಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಬಗ್ಗೆ ಸಹಾಯಕ್ಕೆ ಬರದಿದ್ದರೆ, ಮತ್ತೆ ಇನ್ನಾರು ಬರಬೇಕು? ಕಳೆದ ಎರಡು ವರ್ಷಗಳಿಂದ ಈ ವಿಭಾಗಕ್ಕೆ ಸರ್ಕಾರದಿಂದ ಗ್ರಾಂಟ್ ರಿಲೀಸ್ ಮಾಡುವುದು ಸ್ವಲ್ಪ ತಡವಾಗುತ್ತಿದೆ ನಾಲ್ಕು ತಿಂಗಳಿಗೊಂದು ಸಲ ಆರೇಳು ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡುತ್ತಿರುವುದರಿಂದ, ಸಾಕಷ್ಟು ಪ್ರಾಜೆಕ್ಟ್‌ಗಳು ನಡೆಯದೆ ಹಾಗೆ ಉಳಿದಿವೆ. ೩ಳಿ ಪ್ರಾಜೆಕ್ಟ್‌ಗಳಿಗೆ ಸುಮಾರು ೪೫ ಲಕ್ಷ ರೂಪಾಯಿಗಳನ್ನು ಹಂಚಬೇಕಾಗಿದೆ. ಆದರೆ, ಕಳೆದೆರಡು ವರ್ಷಗಳಿಂದ ಕೇವಲ ೩೨ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಿಂದ, ಅದು ಬರೀ ಸಿಬ್ಬಂದಿಯ ಸಂಬಳ ಸಾರಿಗೆಗೆ ಖರ್ಚಾಗುತ್ತಿದೆ. ಆದರಲ್ಲೂ ಇದು ಅಂತರರಾಷ್ಟ್ರೀಯ ಮಕ್ಕಳ ವರ್ಷವಾದರೂ ಈ ಇಲಾಖೆಯ ಯಾವ ಪ್ರಾಜೆಕ್ಟ್‌ನಲ್ಲೂ ಮಕ್ಕಳ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮವೂ ನಡೆಯುತ್ತಿಲ್ಲ. ಅಲ್ಲಿ ನ್ಯೂಟ್ರಿಷನ್ ಕಾರ್ಯಕ್ರಮವೂ ನಡೆಯುತ್ತಿಲ್ಲ. ಆದುದರಿಂದ, ಮಾನ್ಯ ಸಚಿವರು ನಾನು ಹೇಳಿದ ಎಲ್ಲ ವಿಚಾರಗಳ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನಾನು ಮೊದಲೇ ಹೇಳಿದ ಹಾಗೆ, ನಮ್ಮ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದಿರುವುದು ಇದಕ್ಕೆ ಸ್ವಲ್ಪ ಕಾರಣವಾಗಿದೆ. ಈಗ ತಾನೇ ಜಿಲ್ಲಾ ಮಟ್ಟದ ಸಿಬ್ಬಂದಿ ವರ್ಗಕ್ಕೆ ಮಂಜೂರಾತಿಯಾಗಿದೆ. ಆದುದರಿಂದ, ಇವನ್ನೆಲ್ಲ ತಕ್ಷಣ ತೆಗೆದುಕೊಂಡು, ಬೇರೆ ಸರ್ಕಾರಿ ನೌಕರರು ಯಾವ ರೀತಿ ನಿವೃತ್ತಿ ವೇತನವನ್ನು ಪಡೆಯುತ್ತಿರುವರೋ ಅದೇ ಪ್ರಮಾಣದಲ್ಲಿ ಈ ವಿಭಾಗದ ನೌಕರರಿಗೂ ನಿವೃತ್ತಿ ವೇತನ ಕೊಡುವುದನ್ನು ಪರಿಶೀಲಿಸುತ್ತೇವೆ.

ಶ್ರೀಮತಿ ಸುಶೀಲ ಚೆಲ್ಲರಾಜ್ — ಮಕ್ಕಳ ಮತ್ತು ಮಹಿಳೆಯ ಅಭಿವೃದ್ಧಿಯ ಉದ್ದೇಶ ವಿಟ್ಟುಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ೧೯೭೫ರಲ್ಲಿ ಪ್ರಾರಂಭವಾಗಿದೆ. ಇದರಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ನಿವೃತ್ತಿ ವೇತನವನ್ನು ಒದಗಿಸಿಲ್ಲ. ಆದುದರಿಂದ, ಆದಷ್ಟು ಜಾಗ್ರತೆ ಅವರಿಗೆ ನಿವೃತ್ತಿ ವೇತನ ಸೌಲಭ್ಯವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಇದನ್ನು ಶೀಘ್ರವೇ ಗಮನಿಸುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇದೇ ಉತ್ತರವನ್ನು ಮಾನ್ಯ ಸಚಿವರು ಹಿಂದೆ ಸಹ ಕೊಟ್ಟಿದ್ದರು. ಇನ್ನು ಒಂದೂವರೆ ತಿಂಗಳೊಳಗೆ ಸುಮಾರು ೧೫೦ ಜನ ಹೆಣ್ಣು ಮಕ್ಕಳು ನಿವೃತ್ತರಾಗುವವರಿದ್ದಾರೆ. ಅವರಿಗೆ ಯಾವುದೇ ಸೌಲಭ್ಯವಿಲ್ಲ. ಆದುದರಿಂದ, ಎಷ್ಟು ದಿವಸದಲ್ಲಿ ಈ ಕಾರ್ಯವನ್ನು ಮಾಡುವರೆಂದು ಅವರು ತಿಳಿಸುವರೆ?

ಶ್ರೀಮತಿ ಮನೋರಮಾ ಮಧ್ವರಾಜ್.—೧೫೦ ಜನ ನಿವೃತ್ತರಾಗುವರೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ೧೯೭೯ನೇ ವರ್ಷದಲ್ಲಿ ಕೇವಲ ೩ಳು ಮಂದಿ ಮಾತ್ರ ನಿವೃತ್ತರಾಗಲಿರುವರು. ಅವರಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಲಾಗುವುದು.

ಅಧ್ಯಕ್ಷರು.—ಮಾನ್ಯ ಎಚ್. ಗಂಗಾಧರನ್ ಅವರ ಹೆಸರಿನಲ್ಲಿರುವ ೩೧೨ ನಿಯಮದ ಕೆಳಗೆ ಬರುವ ಪ್ರಸ್ತಾಪವನ್ನು ತಡೆಹಿಡಿಯಲಾಗಿದೆ.

Sale of B.Com. Examination Question Papers

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಿನ್ನೆ ನನಗೊಂದು ಪತ್ರ ಬಂದಿದೆ. ಆದರಲ್ಲಿ ಬಿ. ಕಾಂ, ಪರೀಕ್ಷೆಯ ಬ್ಯಾಂಕಿಂಗ್ ಲಾ ಅಂಡ್ ಪ್ರಾಕ್ಟೀಸ್ ವಿಷಯದ ಪ್ರಶ್ನೆ ಪತ್ರಿಕೆಗಳು ಮಾರುಕಟ್ಟೆಯಲ್ಲಿ ಹಂಚಿಕೆಯಾಗುತ್ತಿವೆ ಎಂದು ಹೇಳಿ, ಪ್ರಶ್ನೆ ಪತ್ರಿಕೆಯೊಂದನ್ನು ಯಾರೋ ಕಳುಹಿಸಿ ಕೊಟ್ಟಿದ್ದಾರೆ. ಇದು ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. ಒಂದು ವೇಳೆ ಸತ್ಯವಾಗಿದ್ದರೆ ಕೂಡಲೇ ಶಿಕ್ಷಣ ಮಂತ್ರಿಗಳು ಕ್ರಮ ತೆಗೆದುಕೊಂಡು, ತನಿಖೆ ನಡೆಸಿ, ಇದಕ್ಕೆ ಕಾರಣರಾರೆಂಬುದನ್ನು ಬಹಿರಂಗ ಗೊಳಿಸಿ, ಸಂಬಂಧಪಟ್ಟ ಅಧಿಕಾರಿ ಮೇಲೆ ಕ್ರಮ ಜರುಗಿಸಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.– ಮಾನ್ಯ ಅಧ್ಯಕ್ಷರೇ, ನಿನ್ನೆ ನನಗೂ ಇಂಥಾದ್ದೆ ಒಂದು ಕಾಗದ ಬಂದಿದೆ. ಆದರ ನಕಲನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಸಹ ಕಳುಹಿಸಿರುವುದಾಗಿ ತಿಳಿಸ ಲಾಗಿದೆ. ಆ ಪತ್ರದ ಒಕ್ಕಣೆ ಹೀಗಿದೆ : "I enclose her with a typed question paper relating to Banking Law and Practice of B.Com. 4th Semester, which will be held on 16th May 1979, Almost all question papers are sold in the public, prior to the examination. I hope you would take necessary action in the matter" ಇದರ ಜೊತೆಗೆ ಟೈಪ್ ಮಾಡಲಾದ ಪ್ರಶ್ನೆ ಪತ್ರಿಕೆ ಯೊಂದನ್ನಿಡಲಾಗಿತ್ತು. ಆಮೇಲೆ, ಇನ್ನೊಂದು ಕಾಗದವನ್ನು ಕೈಯಲ್ಲಿ ಬರೆದು ನನಗೆ ಕಳುಹಿಸಲಾಗಿದೆ. ಇವತ್ತು ಬೆಳಿಗ್ಗೆ ೯–೦೦ ಗಂಟೆಗೆ ಪರೀಕ್ಷೆ ಪ್ರಾರಂಭವಾಗಿ ಈ ವಿಷಯದ ಪ್ರಶ್ನೆ ಪತ್ರಿಕೆಯನ್ನು ವಿದ್ಯಾರ್ಥಿ ಗಳಿಗೆ ಕೊಡಲಾಗಿದೆ. ಅದನ್ನು ಇದರೊಂದಿಗೆ ಹೋಲಿಸಿ ನೋಡಿದಾಗ, ಎರಡೂ ಟ್ಯಾಲಿಯಾಗುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಒಂದು ಪ್ರಶ್ನೆಯೂ ಟ್ಯಾಲಿಯಾಗುತ್ತಿಲ್ಲವೆ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪರೀಕ್ಷೆ ಮುಂದೂಡಬೇಕೆನ್ನುವ ದೃಷ್ಟಿಯಿಂದ ಯಾರೋ. ವಿದ್ಯಾರ್ಥಿ ಹೀಗೆ ಬರೆದಿರಬಹುದು.

Statement by the Chief Mfnister

Karnataka's five year plan for 1978–83

SRI D. DEVARAJ URS (Chief Minister).—Karnataka's economy has registered one of the highest growth rates in the country and in recent years, an annual growth rate of around six per cent has been achieved The 'poor' were kept at the centre of the planning strategy in the Fifth Plan which focussed attention on institutional changes, employment generation, rurul development, minimum needs programme, regional balance and the building up of disaggregative data and the mechanism for decentralised planning. Our developmetl, efforts in the past six years have further strengthened agriculturan industrial, infrastructural and institutional base in the State. With a stronger base which the State possesses and with unexploited and under-utilised material and human resources, the State has decided to launch a more optimistic programme of development during 1978–83 keeping in veiw not only the immediate goals and problems but also a long-term prespective.

The Strategy and Perspective :

2. The twin goals of our planning strategy are :

(1) expending gainful employment opportunities and thereby attaining near full employment by 1987–88 and (2) bringing about a better income distribution that favours the weaker sections of society.